5 ಖಂಡಿತ ಬದಲಾಗಿದೆ. ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಎಚ್ಚರಿಕೆ ವಹಿಸಲು ಸಾಧ್ಯವಾಗಿದೆ. ಈಗಾಗಲೇ ಬರೆಯುವ ಎಲ್ಲ ಬರಹಗಾರರಿಗೂ 'ವಿಮರ್ಶೆ' ಎಂದರೇನು ಎಂಬ ಪರಿಕಲ್ಪನೆ ಗೊತ್ತಿರುವ ಕಾರಣ ಅವರು ತಮ್ಮ ಕೃತಿಯಲ್ಲಿನ ಸೋಲುಗಳೇನು? ಗೆಲುವುಗಳೇನು? ಎಂದು ತಿಳಿದು ಮುಂದಿನ ಕೃತಿಗಳಲ್ಲಿ ಹೊಸ ಸಾಧ್ಯತೆಗಳನ್ನು ಕಾಣಲು ಸಹಾಯಕವಾಗಿದೆ.

6 ವಿಮರ್ಶೆಯೇ ಇಲ್ಲದಿದ್ದರೆ ಕೃತಿಯೊಂದನ್ನು ಹೇಗೆಲ್ಲ ಗ್ರಹಿಸಬೇಕು ಎನ್ನುವುದು ತಿಳಿಯುತ್ತಿರಲಿಲ್ಲ. ಕತೆಯ ವಿನ್ಯಾಸ, ಕಾವ್ಯ ಕ್ರಿಯೆ, ತಾತ್ವಿಕತೆ, ವಸ್ತುತಂತ್ರ, ರೀತಿ, ಉದ್ದೇಶ ಹೀಗೆ ಅನೇಕ ಸಂಗತಿಗಳನ್ನು ಕೇಂದ್ರ ಮಾಡಿಕೊಂಡು ವಿಮರ್ಶೆ ನಡೆದಿದೆ. ವಿಮರ್ಶೆಯೇ ಇಲ್ಲದಿದ್ದರೆ ಒಂದು ಕೃತಿಯ ಮೌಲ್ಯಮಾಪನ ಸಾಧ್ಯವಿರುತ್ತಿರಲಿಲ್ಲ.

7 ನಾನು ಓದುಗನನ್ನು ಕೇಂದ್ರಮಾಡಿಕೊಂಡೇ ಬರೆಯುತ್ತೇನೆ.

ಲೇಖಕರು ಬೆಂಗಳೂರಿನ ಮಹಾರಾಣಿ ಮಹಿಳಾ ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕರು. 'ಭರವಸೆ', 'ಅಯನ', 'ಆಕೃತಿ', 'ನವ್ಯೋತ್ತರ ಮಾರ್ಗ', 'ಬೀಜ ಬಿತ್ತುವ ಗಳಿಗೆ' ಅವರ ಪ್ರಕಟಿತ ಕೃತಿಗಳು.



# ಬೌದ್ಧಿಕ ಹುಡುಕಾಟ ಮುಖ್ಯ

**ಮಂಜುಳಾ ಜಿ.ಎಚ್.**

1 ಇಲ್ಲಿ ಸರಿಯಾದ ವಿಮರ್ಶೆ ಅಂತ ಯಾವುದು ಇಲ್ಲ. ಪುಸ್ತಕದ ಮೌಲ್ಯ ವಿಮರ್ಶಕನಿಂದ ವಿಮರ್ಶಕನಿಗೆ ಬೇರೆ ಬೇರೆಯಾಗಿ ಕಾಣಿಸಬಹುದು. ಹೀಗಾಗಿ ವಿಮರ್ಶಾ ದೃಷ್ಟಿಕೋನ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಾ ಹೋಗುತ್ತದೆ. ಒಂದು ಕೃತಿಯ ಬಗ್ಗೆ ಜನರಾಡುವ ಮಾತುಗಳನ್ನು ಕೂಡಾ ವಿಮರ್ಶೆಯ ನೆಲೆಯಲ್ಲಿ ಗ್ರಹಿಸಬೇಕು.

2 ಒಂದು ಕೃತಿಯ ಬಗ್ಗೆ ಯಾರಾದರೂ ಮಾತನಾಡಿದರೆ ಅದನ್ನು ಕೂಡ ವಿಮರ್ಶೆ ಎಂದೇ ಗ್ರಹಿಸಬೇಕಾಗಿದೆ. ಅಷ್ಟಾಗಿಯೂ ವಿಮರ್ಶೆ ಎನ್ನುವುದು ವ್ಯಕ್ತಿಯ ಅಭಿಪ್ರಾಯವೇ ಹೊರತು ಕೇಳಿ ಪಡೆಯುವ, ದುಂಬಾಲು ಬೀಳುವ ಸಂಗತಿ ಅಲ್ಲ. ಅದು ಒಂದು